**ದಿಃ-20-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃಪ್ರತಿವಾದಿ ಪರ ಶ್ರೀ.ಅರ್.ಓ.ಕೆ. ವಕೀಲರಿಂದ ಃ**

ನನ್ನ ಮುಖ್ಯವಿಚಾರಣೆಯ 2 ನೇ ಪ್ಯಾರಾದಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ. ಈ ಕೇಸಿನಲ್ಲಿ 1 ನೇ ವಾದಿ ತನ್ನ ಪರವಾಗಿ ನನಗೆ ಸಾಕ್ಷಿ ಹೇಳಲು ಯಾವುದೇ ಅಧಿಕಾರ ಕೊಟ್ಟಿಲ್ಲ. 1 ನೇ ವಾದಿ ಪರ ಸಾಕ್ಷಿ ಹೇಳಲು ಯಾವುದೇ ಅಧಿಕಾರ ಪತ್ರ ಕೊಟ್ಟಿಲ್ಲ ಎಂದರೆ ಸರಿ . ಆ ವಿಚಾರವಾಗಿ ನಾನು ಯಾವುದೇ ದಾಖಲಾತಿಗಳನ್ನು ವಾದಿ ಕಂಪನಿ ಪರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರನಿಗೆ ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ನಿಪಿ.13 ಕೊಟ್ಟಿರುತ್ತಾರೆ ಎಂದು ಹೇಳುತ್ತಾನೆ. ನಿಪಿ.13 ಕಾನೂನುಬದ್ಧ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ. ನಿಪಿ.13 ರ ಮೇಲೆ ಸರಿಯಾದ ಸ್ಟಾಂಪ್ ಡ್ಯೂಟಿ ಕಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ.13 ರಲ್ಲಿ ಕನ್ಸಿಡರೇಷನ್ ಅಮೌಂಟ್ ಶೂನ್ಯ ಇದೆ ಎಂದರೆ ಸರಿ . ನಿಪಿ.13 ನ್ನು ಸೆಟಲ್ಮೆಂಟ್ ಮಾಡುವ ಮುಂಚೆಯೇ ಪಡೆದುಕೊಂಡಿದ್ದೇನೆ. ನಿಪಿ.13 ನ್ನು ಸರ್ವೆ ಮಾಡಿದ ನಂತರ ನನಗೆ ಕೊಟ್ಟಿರುತ್ತಾರೆ. ಸರ್ವೆ ವರದಿ ಆಧಾರದ ಮೇಲೆ ನಾವು ಕ್ಲೈಮನ್ನು ಸೆಟಲ್ಮೆಂಟ್ ಮಾಡಿದ್ದೇವೆ. ಕ್ಲೈಂ ಅಮೌಂಟನ್ನು ಕೊಟ್ಟಿದರೂ ಸಹ ಅದನ್ನು ಉದ್ದೇಶಪೂರ್ವಕವಾಗಿ ನಿಪಿ.13 ರಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ನಿಪಿ.13 ನ್ನು ಬರೆದುಕೊಡುವಾಗ ನಾನು ವೈಯಕ್ತಿಕವಾಗಿ ಹಾಜರು ಇರಲಿಲ್ಲ. ನಾನು ಕಳೆದ 7 ವರ್ಷಗಳಿಂದ ವಾದಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸಾಮಾನ್ಯವಾಗಿ ಅಪಘಾತ ಪ್ರಕರಣದಲ್ಲಿ ಯಾರು ಪರಿಹಾರ ಕೊಡಬೇಕು ಎಂದರೆ ಸಾಕ್ಷಿದಾರ ವಾಹನದ ಮಾಲೀಕ ಮತ್ತು

ಇನ್ನುರೆನ್ಸ ಕಂಪನಿಯವರು ಕೊಡಬೇಕಾಗುತ್ತದೆ ಎಂದು ಹೇಳುತ್ತಾನೆ.

ನನ್ನ ಮುಖ್ಯವಿಚಾರಣೆಯ 3ನೇ ಪ್ಯಾರಾದಲ್ಲಿ ಹೇಳಿರುವ ಸಂಗತಿಗಳ ಬಗ್ಗೆ ಟ್ರಕ್ ಮಾಲೀಕರು ಯಾರು ಎಂದು ಗೊತ್ತಿಲ್ಲ. ಅದೇ ರೀತಿಯಾಗಿ ಆ ಟ್ರಕ್ ನ ಚಾಲಕ ಯಾರಿದ್ದರು ಎಂದು ಗೊತ್ತಿಲ್ಲ. ಅದೇ ರೀತಿ ಸದರಿ ಟ್ರಕ್ ಗೆ ಯೂರು ಇನ್ಸುರೆನ್ಸ್ ಪಾಲಿಸಿ ನೀಡಿದ್ದರು ಎಂದು ಗೊತ್ತಿಲ್ಲ. ಆ ಟ್ರಕ್ ನ ಚಾಲಕ ಮಾಲೀಕ , ಮತ್ತು ಇನ್ಸುರೆನ್ಸ್ ಕಂಪನಿ ಯರೆಂದು ತಿಳಿದುಕ್ಕೊಳ್ಳಲು ಪ್ರಯತ್ನ ಮಾಡಲಿಲ್ಲ. ಟ್ರಕ್ ದಿಲೀಪ್ ಕ್ಯಾರಿಯರ್ ಗೆ ಸಂಬಂಧಿಸಿದ್ದು ಮತ್ತು ಅದನ್ನು ಫ್ಯೂಚರ್ ಜನರಲ್ ಇಂಡಿಯಾ ವಿಮಾ ಪಾಲಿಸಿಯಲ್ಲಿ ಇನ್ಸುರೆನ್ಸ ತೆಗೆದುಕೊಂಡಿದ್ದರು ಎನ್ನುವುದು ಗೊತ್ತಿಲ್ಲ. ನಾವು ಮತ್ತು 1ನೇ ವಾದಿ ಟ್ರಕ್ ನ ಮಾಲೀಕರಿಗೆ ನೋಟೀಸ್ ಕೊಟ್ಟಿಲ್ಲ.

ನನ್ನ ಮುಖ್ಯವಿಚಾರಣೆಯ 5ನೇ ಪ್ಯಾರಾದಲ್ಲಿ ನಾವು ಪ್ರತಿವಾದಿಗೆ ನೋಟೀಸ್ ಕಳುಹಿಸಿದ್ದೇವೆ ಎಂದು ಹೇಳಿದ್ದೇನೆ ಎಂದರೆ ಸರಿ . ನಾವು ಯಾವುದೇ ರೀತಿಯ ನೋಟೀಸ್ ಕೊಟ್ಟಿಲ್ಲ, ಹಾಗಾಗಿ ಅಕ್ನಾಲೆಡ್ಜೆಮೆಂಟ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1ನೇ ವಾದಿ ಕಂಪನಿಯು ದಿಲೀಪ್ ಕ್ಯಾರಿಯರ್ ಅವರಿಗೆ ಯಾವ ಟರ್ಮ್ಸ್ ನಲ್ಲಿ ಕಂಜೈನ್ಮೆಂಟನ್ನು ಕಳುಹಿಸಿಕೊಟ್ಟಿದ್ದರು ಎಂದು ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿದಾರ ಕಂಜೈನ್ಮೆಂಟನ್ನು ಇಂಡೋ ಆರ್ಯ ಅವರಿಗೆ 1ನೇ ವಾದಿ ಕಳಹಿಸಿಕೊಟ್ಟಿದ್ದರು ಎಂದು ಹೇಳುತ್ತಾನೆ. ಸಾಕ್ಷಿದಾರನಿಗೆ ಒಂದು ಫೋಟೋ ತೋರಿಸಲಾಗಿ ವಸ್ತುಗಳನ್ನು ಸಾಮಾನ್ಯವಾಗಿ ಕೈಯಲ್ಲಿ ಎತ್ತಿ ಇಡಲು ಆಗುವುದಿಲ್ಲ, ಕ್ರೇನ್ ಮುಖಾಂತರ ವಸ್ತುವನ್ನು ಟ್ರಕ್ ನಲ್ಲಿ ಇಡುತ್ತಾರೆ ಎಂದರೆ ಸರಿ . 1ನೇ ವಾದಿ ಕಂಪನಿಯವರು ಕಳುಹಿಸಿದ ವಸ್ತುಗಳು ಒಂದೇ ಟ್ರಕ್ ನಲ್ಲಿ

ಲೋಡ್ ಮಾಡಿರಲಿಲ್ಲ ಎನ್ನುವುದು ಗೊತ್ತಿಲ್ಲ. ಇಂಡೋ ಆರ್ಯ ಟ್ರಾನ್ಸ್ಪೋರ್ಟ ಅವರು ಕಂಜೈನ್ಮೆಂಟನ್ನು ಪ್ರತಿವಾದಿಯರಿಗೆ ಸರಬರಾಜು ಮಾಡಲು ಹೇಳಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಕಂಪನಿಗೆ ಕಂಜೈನ್ಮೆಂಟನ್ನು ಯಾವ ರೀತಿ ಅಸೆಸ್ಮೆಂಟ್ ಮಾಡಿದ್ದರು ಎನ್ನುವ ವಿಷಯ ಗೊತ್ತಿದ್ದರೂ ಸಹ ಪ್ರತಿವಾದಿಯರ ವಿರುದ್ದ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಜನವರಿ 2013 ರಲ್ಲಿ ನಾನು 2 ನೇ ವಾದಿ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ಆ ಸಮಯದಲ್ಲಿ ಸರ್ವೆಯರ್ ಆಗಿ ಮಿಸ್ಟರ್. ಸಾಂಬಶಿವರಾವ್ ಮತ್ತು ಶ್ರೀನಿವಾಸ್ ಅವರು ಅಲ್ಲಿ ಕೆಲಸ ಮಾಡುತ್ತಿದ್ದರು. ಯಾವುದೇ ಸರ್ವೆ ಮಾಡಲ್ಲಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಪ್ರತಿವಾದಿಗೆ ಎಷ್ಟು ಹಣ ಕೊಟ್ಟಿದ್ದರು ಎನ್ನುವುದು ಗೊತ್ತಿಲ್ಲ. 1 ನೇ ವಾದಿ ಪ್ರತಿವಾದಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಗೊತ್ತಿಲ್ಲ. ನೇ ವಾದಿ ಪ್ರತಿವಾದಿಗೆ ಯಾವುದೇ ಕಂಜೈನ್ಮೆಂಟನ್ನು ಸ್ವಾಧೀನವನ್ನು ಕೊಟ್ಟಿಲ್ಲ, ಹಾಗೂ ಆತನಿಂದ ಹಣ ಪಡೆದುಕೊಂಡಿಲ್ಲ ಆದ್ದರಿಂದ ಪ್ರತಿವಾದಿ ನಮಗೆ ಯಾವುದೇ ಹಣ ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ಸರ್ವೆ ವರದಿಯನ್ನು ಹಾಜರುಪಡಿಸಿದ್ದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಸಾಬಪ್ಪ)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**